ಬೆವರುತ್ತಿದ್ದರು. ಆದರೆ ಅವರ ಕೈಗಳು ದೃಢವಾಗಿದ್ದವು. ಅವರು ಒಳಗೆ ತೂರಿಸುತ್ತಿದ್ದ ಟ್ಯೂಬನ್ನು ನೋಡುತ್ತಿರಲಿಲ್ಲ ಅವರ ಗಮನವೆಲ್ಲಾ ಹ್ಯಾರಿಯ ಹೊಟ್ಟೆಯ ಮೇಲಿನ ಹೊದಿಕೆಯಲ್ಲಿ ಮೂಡಿದ್ದ ಮಡಿಕೆಗಳ ಮೇಲಿತ್ತು. ಅವರು ಕತ್ತೆತ್ತದೆಯೇ ನನ್ನ ಕಡೆಗೆ ಕೈಯನ್ನು ಚಾಚಿದರು. ನಾನು ಕ್ಲೋರೊಫಾರಮ್ಮಿನ ಬಾಟಲಿಯನ್ನು ಅವರ ಕೈಗಿತ್ತೆ. ಅವರು ಕೈಸನ್ನೆಯಲ್ಲೆ ನನ್ನನ್ನು ಹತ್ತಿರ ಕರೆದು ನನ್ನ ಕಿವಿಯಲ್ಲಿ ಉಸುರಿದರು: 'ಮಿಸ್ಟರ್ ಹ್ಯಾರಿಗೆ ಕಿಂಚಿತ್ತೂ ಅಲುಗಾಡಬಾರದೆಂದು ಹೇಳಿ. ನಾನು ಅವರ ಹಾಸಿಗೆಯನ್ನು ಕ್ಲೋರೋಫಾರಮ್ಮಿನಿಂದ ನೆನೆಸುತ್ತೇನೆ. ಇದರಿಂದ ಅವರಿಗೆ ಥಂಡಿ ಆಗಬಹುದು.'

ನಾನು ಬಗ್ಗಿ ಹ್ಯಾರಿಯ ಕಿವಿಯಲ್ಲಿ ಉಸುರಿದೆ. 'ಅದು ಏನು ಮಾಡುತ್ತಿದ್ದಾನೋ ಬೇಗ ಮಾಡಿ ಮುಗಿಸಲಿಕ್ಕೆ ಹೇಳು...' ಅವನು ಸಹನೆ ಕಳೆದುಕೊಳ್ಳುವ ಹಂತದಲ್ಲಿದ್ದಂತೆ ಕಾಣಿಸುತ್ತಿದ್ದ. ಅವನು ಸ್ವಲ್ಪ ಜೋರಾಗಿಯೇ ಹೇಳಿದ್ದರಿಂದ ಡಾಕ್ಟರ್ ಗಾಂಧೇರ್ ಭಾಯಿ ಕೂಡ ಆಶ್ಚರ್ಯಗೊಂಡವರಂತೆ ತಿರುಗಿ ನೋಡಿದರು. ನಂತರ ತಮ್ಮ ಕೆಲಸದಲ್ಲಿ ಮಗ್ನರಾದರು. ಟ್ಯೂಬಿಗೆ ಸಿಗಿಸಿದ್ದ ಪೇಪರ್ ನಳಿಕೆಗೆ ಕ್ಲೋರೋಫಾರ್ಮನ್ನು ತುಂಬಿಸುತ್ತಲೇ ಹೋದರು. ಈಗ ಇಡೀ ರೂಮಿನಲ್ಲಿ ಕ್ಲೋರೋಫಾರಮ್ಮಿನ ಗಾಢವಾದ ವಾಸನೆ ತುಂಬಿಕೊಂಡಿತು. ಸ್ವಲ್ಪ ಸಮಯದ ನಂತರ ಡಾಕ್ಟರ್ ಗಾಂಧೇರ್ ಭಾಯಿ ತಮ್ಮ ಕೆಲಸ ನಿಲ್ಲಿಸಿ ಬಾಟಲನ್ನು ಬೆಳಕಿಗೆ ಹಿಡಿದು ನೋಡಿ ನನ್ನ ಕೈಗಿತ್ತರು. ಮೆಲ್ಲಗೆ ರಬ್ಬರ್ ಟ್ಯೂಬನ್ನು ಹೊರತೆಗೆದು ಎದ್ದುನಿಂತರು. ಅವರು ತುಂಬಾ ಸುಸ್ತಾದಂತೆ ಕಾಣಿಸುತ್ತಿದ್ದರು. 'ನಾವು ಹಾವಿಗೆ ಹದಿನೈದು ನಿಮಿಷ ಸಮಯ ಕೊಡೋಣ. ಇಷ್ಟರಲ್ಲೇ ಕೊಳಕು ಮಂಡಲದ ಜ್ಞಾನ ತಪ್ಪಿರುತ್ತದೆ. ಆದರೂ...' ಎಂದರು.

'ಹಾಗಾದ್ರೆ ಇನ್ನೂ ತಡವೇಕೆ? ಬೇಗ ಮುಗಿಸಿಬಿಡಿ.' ಹ್ಯಾರಿಯ ಅಸಹನೆಪೂರಿತ ದನಿ ಸ್ವಲ್ಪ ಕರ್ಕಶವಾಗಿಯೇ ಇತ್ತು.

ಡಾಕ್ಟರ್ ಗಾಂಧೇರ್ ಭಾಯಿ ಅವನೆಡೆಗೆ ಒಂದು ತೀಕ್ಷ್ಣ ನೋಟ ಬೀರಿದರು. ಅವರಿಗೂ ಸಿಟ್ಟು ಬಂದಿತ್ತು. ಹ್ಯಾರಿಯ ಕೆಳತುಟಿಯ ಅಂಚಿನ ನರವೊಂದು ಜೋರಾಗಿ ಬಡಿದುಕೊಳ್ಳುತ್ತಿತ್ತು. ನಾನು ಅವನ ಮುಖವನ್ನು ಒರೆಸಿದೆ. ನಾವು ಮಂಚದಿಂದ ಸ್ವಲ್ಪ ದೂರದಲ್ಲಿಯೇ ಇದ್ದೆವು. ಡಾಕ್ಟರ್, ಹ್ಯಾರಿಯನ್ನೇ ಕುತೂಹಲದಿಂದ ನೋಡತೊಡಗಿದರು. ಹ್ಯಾರಿ ಡಾಕ್ಟರರ ಕಣ್ಣುಗಳನ್ನು ತಪ್ಪಿಸತೊಡಗಿದ. ಅವನ ತುಟಿಯ ನರ ಇನ್ನೂ ಜೋರಾಗಿ ಬಡಿದುಕೊಳ್ಳುತ್ತಿತ್ತು. ಅವನು ಒಮ್ಮೆ ನನ್ನನ್ನು, ಮತ್ತೊಮ್ಮೆ ತನ್ನ ಹೊಟ್ಟೆಯ ಭಾಗವನ್ನು ಮತ್ತೊಮ್ಮೆ ಛಾವಣಿಯನ್ನು ನೋಡತೊಡಗಿದನಾದರೂ ಡಾಕ್ಟರರ ಕಣ್ಣಿಗೆ ಕಣ್ಣು ಕೊಟ್ಟು ನೋಡಲಾರನಾದ. ಆದರೂ, ಡಾಕ್ಟರ್ ಗಾಂಧೇರ್ ಭಾಯಿ ಅವನನ್ನು ತಮ್ಮ ಕಣ್ಣೋಟದಲ್ಲೇ ಬಂಧಿಸಿದ್ದರು. ಕ್ಲೋರೋಫಾರಮ್ಮಿನ ಘಾಟು ವಾಸನೆ ನನ್ನನ್ನು ಅಸ್ವಸ್ಥನನ್ನಾಗಿಸಿತ್ತು. ಆದರೂ ನಾನು ಆ ರೂಮಿನಿಂದ ಕದಲುವಂತಿರಲಿಲ್ಲ. ಕೊನೆಗೂ ಡಾಕ್ಟರ್ ಗಾಂಧೇರ್ ಭಾಯಿ ಹಸಿರು ನಿಶಾನೆ ತೋರಿಸಿದರು. ಅವರು ಮುಂದಿನ ಹಂತಕ್ಕೆ ತಯಾರಾಗಿದ್ದರು.

'ಮಿಸ್ಟರ್ ಟಿಂಬರ್‌ವುಡ್... ನೀವು ಆ ಬದಿಗೆ ಹೋಗಿ. ನಾವು ಹೊದಿಕೆಯ ಒಂದೊಂದು ಅಂಚನ್ನು ಹಿಡಿದು ಸಾವಕಾಶವಾಗಿ, ಯಾವುದೇ ಗಲಾಟೆ ಗೊಂದಲವಿಲ್ಲದೆ ಒಮ್ಮೆಲೇ ಎಳೆಯೋಣ.'

'ಹ್ಯಾರೀ... ತಯಾರಾಗಿರು. ಕಿಂಚಿತ್ತೂ ಅಲುಗಾಡಬೇಡ' ನಾನೆಂದೆ.

ನಾನು ಮತ್ತು ಡಾಕ್ಟರ್ ಗಾಂಧೇರ್ ಭಾಯಿ ಮಂಚದ ಒಂದೊಂದು ಬದಿಗೆ ನಿಂತೆವು.